# ಕರ್ನಾಟಕದ ಶ್ರೀವೈಷ್ಣವ ಕ್ಷೇತ್ರಗಳು

ಡಾ. ಎನ್.ಕೆ.ರಾಮಶೇಷನ್



ಮೇಲುಕೋಟೆಯ ಕಲ್ಯಾಣಿ

**ಶ್ರೀರಾಮಾನುಜರು ಕನ್ನಡನೆಲದಲ್ಲಿ ಸುಮಾರು ಒಂದೂವರೆ ದಶಕಗಳ ಕಾಲ ನೆಲೆಸಿದ ಫಲವಾಗಿ ಇಲ್ಲಿನ ಹಲವು ಸ್ಥಳಗಳು ಶ್ರೀವೈಷ್ಣವರಿಗೆ ಪುಣ್ಯಕ್ಷೇತ್ರಗಳಾದವು. ಇವುಗಳ ವಿಸ್ತೃತ ಪರಿಚಯವನ್ನು ಮಾಡಿಕೊಟ್ಟಿರುವ ಮೈಸೂರು ನಿವಾಸಿಗಳಾದ ಲೇಖಕರು ಸಂಸ್ಕೃತ ಮತ್ತು ಕನ್ನಡ ವಿದ್ವಾಂಸರು ಮತ್ತು ಶ್ರೀವೈಷ್ಣವ ಸಿದ್ಧಾಂತದ ಅಧ್ಯಯನ ನಡೆಸಿರುವವರು.**

**ಕ**ರ್ನಾಟಕ ರಾಜ್ಯವು ವಿವಿಧ ಧರ್ಮಗಳಿಗೆ ಆಸರೆಯನ್ನು ಇತ್ತಿರುವ ರಾಜ್ಯ. ಇದಕ್ಕೆ ವಿಶಾಲ ಮನೋಧರ್ಮದ ಸಂಸ್ಕೃತಿ ಇದೆ ಹಾಗೂ ವಿಶಿಷ್ಟವಾದ ಇತಿಹಾಸ ಕೂಡ ಇದೆ. ಇಲ್ಲಿ ರಾಮಾನುಜ ಮತದ ಅನುವರ್ತಿಗಳು ಪರಮಪವಿತ್ರವೆಂದು ಭಾವಿಸುವ ಪುಣ್ಯಕ್ಷೇತ್ರಗಳು ಹಲವಾರು ಇವೆ.

### ಮೇಲುಕೋಟೆ

**ಶ್ರೀಶಂ ನಮಾಮಿ ಶಿರಸಾ ಯದುಶೈಲದೀಪಂ** – 'ಯದು ಶೈಲ ಅಥವಾ ಮೇಲುಕೋಟೆಯಲ್ಲಿ ಜಾಜ್ವಲ್ಯಮಾನನಾಗಿ ಬೆಳಗುತ್ತಿರುವ ಲಕ್ಷ್ಮೀಪತಿಗೆ ನಾನು ನಮಿಸುತ್ತೇನೆ' – ಹೀಗೆ ರಾಮಾನುಜ ಮತಾನುವರ್ತಿಗಳಾದ ಶ್ರೀವೈಷ್ಣವರು ಪ್ರತಿದಿನದ ಸಂಧ್ಯಾವಂದನೆಯ ಸಮಯದಲ್ಲಿ ನೆನೆಸಿಕೊಳ್ಳುತ್ತಾರೆ. ಇದು ಪಾರಂಪರಿಕವಾಗಿ ಬೆಳೆದುಬಂದಿರುವ ಸಂಪ್ರದಾಯ. ಕರ್ನಾಟಕದಲ್ಲಿ ಶ್ರೀರಾಮಾನುಜರ ವಾಸ್ತವ್ಯ ಮತ್ತು ಅವರ ಪ್ರಭಾವ – ಈ ಎರಡನ್ನೂ ಮೇಲುಕೋಟೆಯು ಸಂಕೇತಿಸುತ್ತದೆ. ಶ್ರೀವೈಷ್ಣವರ 'ದಿವ್ಯದೇಶ'ಗಳ ಪಟ್ಟಿಯಲ್ಲಿ ಸೇರಿಲ್ಲವಾದರೂ, ಪುರಾಣಪ್ರಸಿದ್ಧವಾದ ಇದನ್ನು 'ಅಭಿಮಾನಕ್ಷೇತ್ರ' ಎಂದು ಕರೆಯುವ ಪದ್ಧತಿ ಇದೆ.. ಶ್ರೀರಾಮಾನುಜಾಚಾರ್ಯರು ಹದಿನಾಲ್ಕು ವರ್ಷಗಳಿಗೂ ಹೆಚ್ಚು ಕಾಲ ಇಲ್ಲಿ ನೆಲೆಸಿದ್ದರು. ಅಷ್ಟೇ ಅಲ್ಲ, ಅವರ ಪ್ರಭಾವಕ್ಕೆ ಒಳಗಾಗಿ ಮಿಕ್ಕ ಕೆಲವು ಕ್ಷೇತ್ರಗಳೂ ಕೂಡ ಶ್ರೀವೈಷ್ಣವರಿಗೆ ಅತ್ಯಂತ ಪವಿತ್ರವೆನಿಸುತ್ತವೆ. ಅವುಗಳಲ್ಲಿ ಕೆಲವೆಂದರೆ **ಮೇಲುಕೋಟೆ, ಸಾಲಿಗ್ರಾಮ, ತೊಂಡನೂರು, ಬೇಲೂರು, ಶ್ರೀರಂಗಪಟ್ಟಣ** ಮುಂತಾದವು.

ಮೇಲುಕೋಟೆಗೆ **ನಾರಾಯಣಾದ್ರಿ, ವೇದಾದ್ರಿ, ಯಾದವಾದ್ರಿ, ಯಾದವಗಿರಿ, ಯದುಶೈಲ** ಮೊದಲಾದ ಅನೇಕ ಹೆಸರುಗಳುಂಟು. ಕೃತಯುಗದಲ್ಲಿ ಬ್ರಹ್ಮನ ಮಾನಸಪುತ್ರನಾದ ಸನತ್ಕುಮಾರನು ಇಲ್ಲಿಗೆ ಬಂದು ಶ್ರೀತಿರುನಾರಾಯಣದೇವರನ್ನು ಪ್ರತಿಷ್ಠಾಪಿಸಿದ ಐತಿಹ್ಯವಿರುವುದರಿಂದ, ಈ ಕ್ಷೇತ್ರಕ್ಕೆ **ನಾರಾಯಣಾದ್ರಿ** ಎಂದು ಹೆಸರಾಯಿತು. ತ್ರೇತಾಯುಗದಲ್ಲಿ ದತ್ತಾತ್ರೇಯ ಮುನಿವರ್ಯರು ಮೇಲುಕೋಟೆಯ ಗಿರಿಪಂಕ್ತಿಯ ಸುಂದರ ಪರಿಸರದಲ್ಲಿ ವೇದಗಳ ಪ್ರವಚನ ಮಾಡಿದರು. ಇದರಿಂದ **ವೇದಾದ್ರಿ** ಎಂಬ ಹೆಸರು ಬಂತು. ದ್ವಾಪರಯುಗದಲ್ಲಿ ಶ್ರೀಕೃಷ್ಣ ಮುಂತಾದವರು ಬಂದು ಇಲ್ಲಿ ಪೂಜೆಗೈದಿದ್ದರಿಂದ ಈ ಸ್ಥಳಕ್ಕೆ **ಯಾದವಾದ್ರಿ** ಎಂಬ ನಾಮಧೇಯವೂ ಪ್ರಾಪ್ತವಾಯಿತು. ಹೀಗೆ ಮೇಲುಕೋಟೆಯು ಪುರಾಣಪ್ರಸಿದ್ಧವಾಗಿದೆ.



ತಿರುನಾರಾಯಣಸ್ವಾಮಿ ದೇವಸ್ಥಾನ

ಕ್ರಿ.ಶ. ೭–೮ ನೆಯ ಶತಮಾನದಲ್ಲಿ ಆಳ್ವಾರರಲ್ಲಿ ಕೆಲವರು ಮೇಲುಕೋಟೆಗೆ ಬಂದಿದ್ದರೆಂದು ಪ್ರತೀತಿ. ಕನ್ನಡನಾಡಿನಲ್ಲಿ ಪ್ರಚಲಿತವಾದ ಧರ್ಮಗಳ ಇತಿಹಾಸದಲ್ಲಿ ಮೇಲುಕೋಟೆ ಅತ್ಯಂತ ಮಹತ್ವವನ್ನು ಪಡೆದಿದೆ. ಚೋಳರಾಜನಾದ ಇಮ್ಮಡಿ ಕುಲೋತ್ತುಂಗನ ಆಳ್ವಿಕೆಯ ಸಮಯದಲ್ಲಿ (ಸುಮಾರು ಕ್ರಿ.ಶ. ೧೧೯೭), ತಮಿಳುನಾಡಿನಲ್ಲಿ ಶ್ರೀವೈಷ್ಣವರಿಗೆ ಬಂದೊದಗಿದ ವಿಪತ್ತಿನಿಂದಾಗಿ ರಾಮಾನುಜರು ವಲಸೆ ಬಂದಾಗ, ಅವರಿಗೆ ಆಶ್ರಯವನ್ನು ನೀಡಿದ್ದು ಕನ್ನಡದ ನೆಲವೇ. ಹೀಗಾಗಿ ಮೇಲುಕೋಟೆಯು ಶ್ರೀವೈಷ್ಣವರ ಪ್ರಮುಖ ಕೇಂದ್ರವಾಗಿ ಮಾರ್ಪಟ್ಟಿತು.

ಶ್ರೀರಾಮಾನುಜರು ಸತ್ತೇಗಾಲ, ಸಾಲಿಗ್ರಾಮ, ತೊಂಡನೂರುಗಳ ಮಾರ್ಗವಾಗಿ ಮೇಲುಕೋಟೆಗೆ ಬಂದರು ಎಂದು 'ಗುರುಪರಂಪರಾಪ್ರಭಾವ' ಮತ್ತು 'ಪ್ರಪನ್ನಾಮೃತ' ಎಂಬ ಧಾರ್ಮಿಕ ಗ್ರಂಥಗಳಿಂದ ತಿಳಿದುಬರುತ್ತದೆ. ಇಲ್ಲಿ ಅವರಿಗೆ ಶ್ರೀವೈಷ್ಣವರ ಮತಲಾಂಛನಕ್ಕೆ ಅವಶ್ಯವಾಗಿದ್ದ 'ತಿರುಮಣ್' – ಅಂದರೆ ಬಿಳಿಯಬಣ್ಣದ ಮೃತ್ತಿಕೆಯು ದೊರಕಿತಂತೆ. ಅದಲ್ಲದೆ ಇಲ್ಲಿನ ಆಧ್ಯಾತ್ಮಿಕ ಪರಿಸರದಿಂದ ಆಕರ್ಷಿತರಾದ ರಾಮಾನುಜಾಚಾರ್ಯರು ಸುಮಾರು ಒಂದೂವರೆ ದಶಕಗಳ ಕಾಲ ಇಲ್ಲಿ ನೆಲೆಸಿ, ಹತ್ತುಹಲವು ಸೇವಾಕಾರ್ಯಗಳನ್ನು ಕೈಗೊಂಡರು. ಇವರು ಮೇಲುಕೋಟೆಯನ್ನು ಜೀರ್ಣೋದ್ಧಾರ ಮಾಡಿದ್ದರಿಂದ, ಈ ಕ್ಷೇತ್ರವು **ಯತಿಶೈಲ** ಎಂದೂ ಪ್ರಸಿದ್ಧವಾಗಿದೆ. ಮೇಲುಕೋಟೆ ಮತ್ತು ಇದರ ಸುತ್ತಮುತ್ತ ದೊರೆತಿರುವ ಶಾಸನಗಳಲ್ಲಿ, ಈ ಪಟ್ಟಣವನ್ನು **ದಕ್ಷಿಣಬದರಿಕಾಶ್ರಮ, ತಿರುನಾರಾಯಣಪುರ, ವೈಕುಂಠವರ್ಧನ ಕ್ಷೇತ್ರ** ಎಂದೆಲ್ಲ ಕರೆದಿರುವುದು ಕಂಡುಬರುತ್ತದೆ. 'ಎಪಿಗ್ರಾಫಿಯ ಕರ್ನಾಟಿಕಾ'ದ ಮಂಡ್ಯ ಜಿಲ್ಲೆಯ ವಿಭಾಗದಲ್ಲಿ ಈ ಬಗ್ಗೆ ಅನೇಕ ವಿವರಗಳು ದೊರಕುತ್ತವೆ. ಹೊಯ್ಸಳರ ವೀರಬಲ್ಲಾಳನ ಕಾಲಕ್ಕೆ ಸೇರಿದ, ಕ್ರಿ.ಶ. ೧೧೮೯ ನೆಯ ಶಾಸನದಲ್ಲಿ ಮೇಲುಕೋಟೆಯ ಬಗ್ಗೆ ಪ್ರಸ್ತಾಪವಿದೆ. ಇದರಿಂದ ಹೊಯ್ಸಳರ ಕಾಲದಲ್ಲಿ ಇಲ್ಲೊಂದು ದುರ್ಗವಿತ್ತೆಂದು ಕಂಡುಬರುತ್ತದೆ.


ಶ್ರೀರಾಮಾನುಜರು ಮೇಲುಕೋಟೆಯಲ್ಲಿ ಶ್ರೀತಿರುನಾರಾಯಣ ಸ್ವಾಮಿಯ ವಿಗ್ರಹವನ್ನು ಪ್ರತಿಷ್ಠಾಪಿಸಿದರು. ಆಗ ಅವರಿಗೆ ಸುಮಾರು ೮೦ ವರ್ಷ ವಯಸ್ಸು. ಜೈನನಾಗಿದ್ದ ಹೊಯ್ಸಳ ದೊರೆ ಬಿಟ್ಟಿದೇವನು, ರಾಮಾನುಜರಿಂದ ಶ್ರೀವೈಷ್ಣವದೀಕ್ಷೆ ಪಡೆದು ವಿಷ್ಣುವರ್ಧನನಾದನು. ಅವನು ಆಚಾರ್ಯರಿಗೆ ತುಂಬು ಸಹಕಾರವನ್ನು ನೀಡಿದನೆಂದು ತಿಳಿದುಬರುತ್ತದೆ.

**ಚೆಲುವನಾರಾಯಣ, ಚೆಲುವರಾಯಸ್ವಾಮಿ, ಶೆಲ್ವ ನಾರಾಯಣ, ತಿರುನಾರಾಯಣ** ಎಂದೆಲ್ಲ ಪ್ರಸಿದ್ಧವಾಗಿರುವ ಶ್ರೀನಾರಾಯಣನ ದೇಗುಲವು ಮೇಲುಕೋಟೆಯ ಪ್ರಮುಖ ಆಕರ್ಷಣೆಯಾಗಿದೆ. ಸುಮಾರು ೨೮೦ ಅಡಿಗಳ ಚಚ್ಚೌಕದ ಆಕಾರದಲ್ಲಿದ್ದು, ಹೊಯ್ಸಳರ ವಾಸ್ತುಶೈಲಿಯಲ್ಲಿ ನಿರ್ಮಾಣವಾದ ಈ ದೇಗುಲದಲ್ಲಿ ಮೈಸೂರು ಒಡೆಯರ ಕಾಲದ ಕಂಬಗಳು ಕಂಡುಬರುತ್ತವೆ. ಸುತ್ತಲೂ ಕೈಸಾಲೆ, ಮುಂದೆ ಮಹಾದ್ವಾರ ಮತ್ತು ಎತ್ತರದ ಗೋಪುರವುಳ್ಳ ವಿಸ್ತಾರವಾದ ಕಟ್ಟಡ ಇದು. ಇದನ್ನೆಲ್ಲ ಒಳಗೊಂಡಂತೆ ಕಲ್ಲಿನ ಪ್ರಾಕಾರವಿದೆ. ಶ್ರೀಆಳ್ವಾರರು, ಸುದರ್ಶನ, ನಾಚ್ಚಿಯಾರ್ (ಯದುಗಿರಿ ನಾಯಕಿ), ಶ್ರೀರಾಮಾನುಜರ ಸನ್ನಿಧಿ, ಯಜ್ಞಶಾಲೆ, ಪಾಕಶಾಲೆ, ಮಂಟಪಗಳು – ಇವೆಲ್ಲವೂ ದೇವಾಲಯದ ಪ್ರಾಕಾರದಲ್ಲಿ ಇವೆ. ಹಾಗೆಯೇ ದೇವಾಲಯದ ಹೊರವಲಯದಲ್ಲಿ ಗರುಡಸ್ತಂಭ, ಮಂಟಪ, ಬದರಿ ವೃಕ್ಷಗಳನ್ನು ಕಾಣಬಹುದು.

ಮೂಲದೇವರ ಆಲಯದಲ್ಲಿ ಗರ್ಭಗುಡಿ ಹಾಗೂ ಅದರ ಸುತ್ತಲೂ, ವೈರಮುಡಿಯ ಉತ್ಸವದ ರಾತ್ರಿ ಮಾತ್ರ ತೆರೆಯುವ ಕತ್ತಲೆ ಪ್ರದಕ್ಷಿಣೆಯ ಆವರಣ ಇದೆ. ಇದರ ಮುಂದಿರುವ ಸ್ತಂಭಗಳಿಂದ ಕೂಡಿದ ನವರಂಗಕ್ಕೆ ಮೂರು ಕಡೆಗಳಿಂದ ಪ್ರವೇಶ ಕಲ್ಪಿಸಲಾಗಿದೆ. ದೇಗುಲದ ಪ್ರತಿಯೊಂದು ಕಂಬದಲ್ಲಿಯೂ ರಾಮಾಯಣ, ಮಹಾಭಾರತ, ಭಾಗವತಗಳ ಸಾಂದರ್ಭಿಕ ಚಿತ್ರಗಳು ಕಡೆಯಲ್ಪಟ್ಟಿವೆ. ಇಲ್ಲಿನ ಒಂದೊಂದು ಕಂಬವೂ ಒಂದೊಂದು ಕತೆ ಹೇಳುತ್ತದೆ. ವಿಭೀಷಣನು ರಾಮನಲ್ಲಿ ಶರಣಾಗತನಾಗುತ್ತಿರುವುದು, ಅರ್ಜುನನು ಇಂದ್ರಕೀಲ ಪರ್ವತದಲ್ಲಿ ತಪಸ್ಸು ಮಾಡುತ್ತಿರುವುದು – ಈ ದೃಶ್ಯಗಳು ಕಣ್ಣು ಮತ್ತು ಮನಸ್ಸುಗಳನ್ನು ತಂಪುಗೊಳಿಸುತ್ತವೆ.

ಈ ದೇವಾಲಯದ ವಿಶಿಷ್ಟತೆಯೆಂದರೆ, ಉತ್ಸವಮೂರ್ತಿಯಾದ **ಶೆಲ್ವಪಿಳ್ಳೆ** ಅಥವಾ **ಸಂಪತ್ಕುಮಾರ** (ಚೆಲುವಾಗಿರುವ ಬಾಲಕ ಎಂದರ್ಥ). ಇದನ್ನು ಗರ್ಭಗುಡಿಗೆ ಹೊರತಾದ

ಒಂದು ಮಂಟಪದಲ್ಲಿ, ನವರಂಗದಲ್ಲಿಯೇ ಇರಿಸಲಾಗಿದೆ. ಇದನ್ನು 'ರಾಮಪ್ರಿಯ' ಎಂದೂ ಕರೆಯುತ್ತಾರೆ. ಈ ವಿಗ್ರಹದ ಬಗ್ಗೆ ಒಂದು ಕತೆಯಿದೆ. ದೂರದ ದೆಹಲಿಯ ಸುಲ್ತಾನನ ಮಗಳಾದ 'ವರನಂದಿ' ಎಂಬುವವಳು ಶೆಲ್ವಪಿಳ್ಳೆಯನ್ನು ತನ್ನ ಅಂತಃಪುರದಲ್ಲಿ ಇರಿಸಿಕೊಂಡಿದ್ದಳಂತೆ. ಅದನ್ನು ಕೇಳಿ ತಿಳಿದ ರಾಮಾನುಜರು ದೂರದ ದೆಹಲಿಯವರೆಗೆ ಪ್ರಯಾಸದ ಪ್ರವಾಸವನ್ನು ಮಾಡಿ, ಆಕೆಯಿಂದ ವಿಗ್ರಹವನ್ನು ತಂದರು. ಭಗವಂತನ ವಿರಹ ತಾಳಲಾರದೆ, ವರನಂದಿ ಆಚಾರ್ಯರನ್ನು ಹಿಂಬಾಲಿಸುತ್ತ ಬಂದು, ದೇವರಲ್ಲಿಯೇ ಐಕ್ಯಳಾದಳು. ಇದರ ಕುರುಹಾಗಿ, ತಿರುನಾರಾಯಣನ ಪಾದದಡಿ ವರನಂದಿಯ ವಿಗ್ರಹವಿದೆ. ಇವಳನ್ನು 'ಬೀಬಿ ನಾಚ್ಚಿಯಾರ್' ಎಂದೂ ಕರೆಯುತ್ತಾರೆ. 'ವರನಂದಿ ಕಲ್ಯಾಣ', ತಿಮ್ಮ ಕವಿ ವಿರಚಿತ 'ಯಾದವಗಿರಿ ಮಾಹಾತ್ಮ್ಯ' – ಈ ಗ್ರಂಥಗಳಲ್ಲಿ ಈ ವಿಚಾರ ನಿರೂಪಿತವಾಗಿರುವುದು ಮನನೀಯ. ರಾಮಾನುಜರು ಈ ಮೂರ್ತಿಯನ್ನು ಕಂಡದ್ದು ವಿಕೃತಿ ಸಂವತ್ಸರದ ಆಶ್ವಯುಜ ಶುದ್ಧ ಸಪ್ತಮಿಯಂದು. ಇದರ ನೆನಪಿಗಾಗಿ ಈಗಲೂ 'ಡೆಲ್ಲಿ ಉತ್ಸವ' ಎಂಬ ಮಹೋತ್ಸವವನ್ನು ನಡೆಸಲಾಗುತ್ತದೆ.


ಬೆಟ್ಟದ ಮೇಲಿನ ಯೋಗಾನರಸಿಂಹ ದೇವಸ್ಥಾನ

ಇಲ್ಲಿನ ಶ್ರೀರಾಮಾನುಜರ ವಿಗ್ರಹಕ್ಕೆ ಶ್ರೀರಾಮಾನುಜಾಚಾರ್ಯರೇ ಸ್ವತಃ ಜೀವ ತುಂಬಿದರೆಂಬ ಐತಿಹ್ಯ ಇದೆ. ಮೇಲುಕೋಟೆಯನ್ನು ಬಿಟ್ಟು ತಮ್ಮ ಮೂಲಸ್ಥಾನವಾದ ಶ್ರೀರಂಗಕ್ಕೆ ಹೊರಡುವ ಸಂದರ್ಭದಲ್ಲಿ, ಆಚಾರ್ಯರ ಅಗಲಿಕೆಯನ್ನು ತಡೆಯಲಾಗದೆ, ಅನೇಕ ಜನ ಶಿಷ್ಯರು ಬಹಳವಾಗಿ ನೊಂದುಕೊಂಡರು. ಅವರ ಮೇಲೆ ಅನುಕಂಪವನ್ನು ತೋರಿದ ಆಚಾರ್ಯರು, ತಮ್ಮ ಯೌಗಿಕ ಶಕ್ತಿಯಿಂದ, ತಮ್ಮದೇ ಮೂರ್ತಿಯನ್ನು ಒಮ್ಮೆ ಆಲಿಂಗಿಸಿಕೊಂಡು ಅದರಲ್ಲಿ ತಮ್ಮ ಚೈತನ್ಯವನ್ನು ತುಂಬಿ ಅನುಗ್ರಹಿಸಿದರೆಂದು ಐತಿಹ್ಯ.

ಈ ದೇವಾಲಯದಲ್ಲಿ ಪಾಂಚರಾತ್ರ ಆಗಮದ ಪ್ರಕಾರ ಪೂಜಾದಿಗಳು ನೆರವೇರುತ್ತವೆ. ದೇವರ ಕೈಂಕರ್ಯ, ದೇವಸ್ಥಾನದ ಮೇಲ್ವಿಚಾರಣೆ ಮುಂತಾದ ವಿಷಯಗಳಲ್ಲಿನ ಸಂಪ್ರದಾಯಗಳು ಶ್ರೀರಾಮಾನುಜರು ಹಾಕಿಕೊಟ್ಟ ನಿಯಮಗಳ ಪ್ರಕಾರವೇ ಇಂದಿಗೂ ನಡೆಯುತ್ತಿರುವುದು ವಿಶೇಷ. ಈ ನಡಾವಳಿಗಳನ್ನು ಪರಿಪಾಲಿಸಲು ರಾಮಾನುಜರೇ ತಮ್ಮ ಜೊತೆ ಕರೆತಂದ ಐವತ್ತೆರಡು ವ್ಯಕ್ತಿಗಳ ವಂಶದವರೇ (ಐಂಬತ್ತಿರುವರ್) ಇಂದಿಗೂ ಅವುಗಳನ್ನು ಪರಿಪಾಲಿಸುತ್ತಿದ್ದಾರೆ.

ಮೇಲುಕೋಟೆಯಲ್ಲಿ ಎಂಟು ಪವಿತ್ರ ಕೊಳಗಳಿವೆ. ಅವುಗಳನ್ನು **ಅಷ್ಟತೀರ್ಥ**ಗಳೆಂದು ಕರೆಯುತ್ತಾರೆ.

ತಮಗೆ ಸ್ವಪ್ನದಲ್ಲಿ ಭಗವಂತನೇ ನೀಡಿದ ನಿರ್ದೇಶನದಂತೆ, ಮೊದಲು ಹುತ್ತದಲ್ಲಿದ್ದ ತಿರುನಾರಾಯಣನ ವಿಗ್ರಹವನ್ನು, ರಾಮಾನುಜರೇ ಹುಡುಕಿಸಿ, ತೆಗೆದು ಪ್ರತಿಷ್ಠಾಪನೆ ಮಾಡಿದರು. ಈ ಶೋಧನಕಾರ್ಯಕ್ಕೂ, ಪ್ರತಿಷ್ಠಾಪನೆಗೂ ಹೊಯ್ಸಳ ದೊರೆ ವಿಷ್ಣುವರ್ಧನ ನೆರವಾದ. ಕ್ರಿ.ಶ. ೧೧೧೦ ರಲ್ಲಿ ತಿರುನಾರಾಯಣ ಸ್ವಾಮಿಯ ಪ್ರತಿಷ್ಠಾಪನೆಯಾಯಿತು. ರಾಜ ಒಂದನೆಯ ನರಸಿಂಹನ ಕಾಲದಲ್ಲಿ (ಕ್ರಿ.ಶ. ೧೧೫೫) ತೊಂಡನೂರಿನ ಮಹಾಜನಗಳು ಈ ದೇವರಿಗೆ ಮಾನ್ಯ ನೀಡಿದರೆಂದು ಒಂದು ಶಾಸನ ತಿಳಿಸುತ್ತದೆ. ಅದಲ್ಲದೆ, ಮೂರನೆಯ ಬಲ್ಲಾಳನ ಸಾಮಂತನಾಗಿದ್ದ ವಿಷ್ಣುಭಕ್ತ ಮಾಧವ ಡಣ್ಣಾಯಕನು ದೇವಾಲಯದ ಅಭಿವೃದ್ಧಿಕಾರ್ಯಗಳಿಗೆ ಅನೇಕ ಬಗೆಯಲ್ಲಿ ನೆರವಾಗಿದ್ದನೆಂಬುದೂ ಶಾಸನಗಳಿಂದ ತಿಳಿದುಬರುತ್ತದೆ. ಕ್ರಿ.ಶ.೧೪ ನೆಯ ಶತಮಾನದಲ್ಲಿ ಮೇಲುಕೋಟೆ ಮಹಮ್ಮದೀಯರ ಧಾಳಿಗೆ ಒಳಗಾಗಿತ್ತು. ಕ್ರಿ.ಶ. ೧೪೬೦ ರಲ್ಲಿ ವಿಜಯನಗರದ ಅರಸನಾದ ಮಲ್ಲಿಕಾರ್ಜುನನ ಸಚಿವ ತಿಮ್ಮಣ್ಣ ದಂಡನಾಯಕನೆಂಬುವವನು ದೇವಾಲಯದ ಜೀರ್ಣೋದ್ಧಾರ ಮಾಡಿಸಿದನು.

ಮೇಲುಕೋಟೆಯಲ್ಲಿ ಪ್ರತಿನಿತ್ಯವೂ ಏನಾದರೂ ಒಂದು ಉತ್ಸವ, ಸಮಾರಂಭ ಇದ್ದೇ ಇರುತ್ತದೆ. ಮೈಸೂರು ಅರಸರು ಚೆಲುವರಾಯಸ್ವಾಮಿಗೆ ಹೇರಳವಾಗಿ ಧನಕನಕಗಳನ್ನು ಸಮರ್ಪಿಸಿದ್ದಾರೆ. ರಾಜ ಒಡೆಯರು 'ರಾಜಮುಡಿ' ಎಂಬ ಹೆಸರಿನ ಹಾಗೂ ಮುಮ್ಮಡಿ ಕೃಷ್ಣರಾಜ ಒಡೆಯರು 'ಕೃಷ್ಣಮುಡಿ' ಎಂಬ ಹೆಸರಿನ ರತ್ನಖಚಿತ ಕಿರೀಟವನ್ನು ದೇವರಿಗೆ ಅರ್ಪಿಸಿದ್ದಾರೆ. ಪ್ರತಿ ವರ್ಷ ಫಾಲ್ಗುಣ ಮಾಸದ ಪುಷ್ಯ ನಕ್ಷತ್ರದ ದಿವಸ 'ವೈರಮುಡಿ' ಉತ್ಸವವು ನಡೆಯುತ್ತದೆ. ನಯನಾನಂದಕರವಾದ, ಮನ ಮುದಗೊಳ್ಳುವ ಉತ್ಸವವಿದು. ಇದಾದನಂತರ, 'ರಾಜಮುಡಿ' ಉತ್ಸವವು ಜರುಗುತ್ತದೆ.

ಮೇಲುಕೋಟೆಯಲ್ಲಿ ಶ್ರೀರಾಮಾನುಜರು ಸ್ಥಾಪಿಸಿದ ಯತಿರಾಜ ಮಠ, ಮುದಲಿಯಾಂಡಾನ್ ತಿರುಮಾಳಿಗೈ

(ಮುದಲಿಯಾಂಡಾನ್ ಎಂಬುದು ರಾಮಾನುಜರ ಪ್ರಥಮ ಶಿಷ್ಯನಾದ ದಾಶರಥಿಯ ಮತ್ತೊಂದು ಹೆಸರು), ಪರಕಾಲ ಮಠ, ಅಹೋಬಿಲ ಮಠ, ವಾನಮಾಮಲೈ ಮಠ – ಹೀಗೆ ಅನೇಕ ಮಠಗಳಿವೆ.

ಊರಿಗೆ ಹತ್ತಿರವೇ ಚಿಕ್ಕದೊಂದು ಬೆಟ್ಟದ ಮೇಲೆ **ಯೋಗಾ ನರಸಿಂಹ** ದೇವಸ್ಥಾನವಿದೆ. ಚೆಲುವನಾರಾಯಣ ದೇವಸ್ಥಾನದ ಬಲಕ್ಕೆ ಎತ್ತರದ ಪ್ರದೇಶದಲ್ಲಿ, **'ಗೋಪಾಲರಾಯನ ಬಾಗಿಲು'** ಎಂಬ ಅರ್ಧಮಾತ್ರ ನಿರ್ಮಿಸಿರುವ ಕೋಟೆಬಾಗಿಲು ಇದೆ. ನಾಲ್ಕು ದೊಡ್ಡ ದೊಡ್ಡ ಕಲ್ಲುಗಂಬಗಳು, ಸುಂದರವಾದ ಶಿಲ್ಪಗಳು, ಸುತ್ತಣ ರಮ್ಯ ಪ್ರಕೃತಿಯ ಹಾಸು – ಇಲ್ಲಿನ ವೈಶಿಷ್ಟ್ಯ.

ಊರ ಮುಂದಿನ **ಕಲ್ಯಾಣಿ**, ಊರ ಹೊರಗೆ ಸುಂದರ ಪರಿಸರದಲ್ಲಿರುವ **ಸಂಸ್ಕೃತ ಸಾಹಿತ್ಯ ಅಕಾಡೆಮಿ** – ಇವು ಮೇಲು ಕೋಟೆಗೆ ಮೆರಗು ನೀಡುತ್ತವೆ. ಕನ್ನಡದ ಸುಪ್ರಸಿದ್ಧ ಕವಿಗಳಾದ ಪು.ತಿ.ನರಸಿಂಹಾಚಾರ್ಯರು ಇಲ್ಲಿನವರೇ. ಅವರು ಮೇಲುಕೋಟೆಯ ಸೊಬಗನ್ನು ಪ್ರಶಂಸಿಸುವ 'ಯದುಗಿರಿಯ ಮೌನವಿಕಾಸ' ಎಂಬ ನೀಳ್ಗವಿತೆಯಲ್ಲಿ ಈ ಸ್ಥಳದ ಸೌಂದರ್ಯವನ್ನು ಬಹಳ ಹೃದಯಂಗಮವಾದ ರೀತಿಯಲ್ಲಿ ಬಣ್ಣಿಸಿದ್ದಾರೆ. ಹಾಗೆಯೇ, ಮೇಲುಕೋಟೆಯ ಚೆಲುವನಾರಾಯಣನನ್ನು ಕುರಿತಂತೆ ಸುತ್ತಣ ಗ್ರಾಮಗಳವರ ಜಾನಪದ ಕೃತಿಗಳು ತುಂಬಾ ಸೊಗಸಾಗಿವೆ. ಹಿಂದಿನವರ ಲೆಕ್ಕಾಚಾರದಂತೆ, ಈ ಕ್ಷೇತ್ರದಲ್ಲಿ ೨೯ ಕೊಳಗಳು, ೭೩ ಮಂಟಪಗಳು, ೧೯ ತೋಟಗಳು ಇದ್ದವಂತೆ. ಈಗ ತೋಟಗಳು ಕಾಣದಾಗಿವೆ.

### ತೊಂಡನೂರು ಅಥವಾ ಕೆರೆತೊಣ್ಣೂರು

'ತೊಂಡ' ಎಂದರೆ ತಮಿಳಿನಲ್ಲಿ 'ಭಕ್ತ' ಎಂದು ಅರ್ಥ. ಆದರೆ ಈ ಊರಿನಲ್ಲಿ ಇರುವ ಭವ್ಯವಾದ ಕೆರೆಯ ದೆಸೆಯಿಂದ 'ಕೆರೆತೊಣ್ಣೂರು' ಎಂದೇ ಇದು ಪ್ರಸಿದ್ಧ. ಮೇಲುಕೋಟೆಯಿಂದ ಸ್ವಲ್ಪ ದೂರದಲ್ಲಿರುವ ಈ ಸಣ್ಣ ಹಳ್ಳಿ ಹಿಂದೆ ಹೊಯ್ಸಳರ ರಾಜಧಾನಿಯಾಗಿತ್ತೆಂದು ದಾಖಲೆಗಳಿವೆ. ಆದರೂ ಇಲ್ಲಿ ಅದರ ಯಾವ ಕುರುಹೂ ಇಲ್ಲದಿರುವುದು ವಿಷಾದನೀಯ. ರಾಮಾನುಜರು ಇಲ್ಲಿ ಕೂಡ ಹಲವು ವರ್ಷಗಳು ಇದ್ದರು. ಹೊಯ್ಸಳ ಅರಸ ಬಿಟ್ಟಿದೇವನು 'ವಿಷ್ಣುವರ್ಧನ' ನಾದುದು ಇಲ್ಲಿಯೇ. ಇಲ್ಲಿರುವ ಲಕ್ಷ್ಮೀನಾರಾಯಣ ದೇವಾಲಯ ೧೨ ನೆಯ ಶತಮಾನಕ್ಕೆ ಸೇರಿದ್ದು. ಅದಲ್ಲದೆ, ಶ್ರೀಕೃಷ್ಣ, ನಂಬಿ ನಾರಾಯಣ ಹಾಗೂ ದಿಬ್ಬದ ಮೇಲಿರುವ ನರಸಿಂಹನ ಸನ್ನಿಧಿ ಗಳನ್ನು ಇಲ್ಲಿ ಕಾಣಬಹುದು.

ಎಲ್ಲಕ್ಕೂ ಮಿಗಿಲಾಗಿ ರಾಮಾನುಜಾಚಾರ್ಯರೇ ನಿರ್ಮಿಸಿ ದರೆಂದು ಹೇಳಲಾಗುವ ದೊಡ್ಡ ಜಲಾಶಯವು ಇಲ್ಲಿನ ಪರಿ ಸರದ ಪ್ರಮುಖ ಆಕರ್ಷಣೆಯಾಗಿದೆ. ಈ ಕೆರೆಯ ನೀರು ಬಹಳ ಶುದ್ಧವಾದುದು. ಅದಕ್ಕೆಂದೇ ಟಿಪ್ಪು ಸುಲ್ತಾನ್, ಇದನ್ನು 'ಮೋತಿ ತಾಲಾಬ್' ಎಂದು ಕರೆಯುತ್ತಿದ್ದನಂತೆ ಹಾಗೂ ಪ್ರತಿನಿತ್ಯ ಕುಡಿಯುವ ನೀರಿಗೆ ಇದನ್ನೇ ಬಳಸುತ್ತಿದ್ದನಂತೆ.

### ಚುಂಚನಕಟ್ಟೆ

ಕೃಷ್ಣರಾಜನಗರದಿಂದ (ಹಿಂದಿನ ಯಡತೊರೆ) ಪಶ್ಚಿಮ ದಿಕ್ಕಿನಲ್ಲಿ, ೧೫ ಕಿ.ಮೀ. ದೂರದಲ್ಲಿ ಚುಂಚನಕಟ್ಟೆ ಎಂಬ ಗ್ರಾಮವಿದೆ. 'ಚುಂಚ' ಎಂಬ ಶ್ರೀರಾಮಭಕ್ತನಿಂದ ಈ ಹೆಸರು ಬಂದಿತೆಂದು ಹೇಳುತ್ತಾರೆ. ಅರಣ್ಯವಾಸದ ಸಮಯದಲ್ಲಿ ಶ್ರೀರಾಮನು ಸೀತೆ ಮತ್ತು ಲಕ್ಷ್ಮಣರೊಡನೆ ಇಲ್ಲಿಗೆ ಬಂದಿದ್ದನೆಂದು ಪ್ರತೀತಿ. ಶ್ರೀರಾಮಾನುಜರು ಇಲ್ಲಿ ಕೂಡ ಕೆಲಕಾಲ ತಂಗಿದ್ದರು ಎಂದು ಹೇಳಲಾಗುತ್ತದೆ. ಇಲ್ಲಿ ಕಾವೇರಿ ನದಿ ಹರಿಯುವ ರೀತಿ ಅತ್ಯಂತ ಮನೋಹರವಾದುದು. ಇಲ್ಲಿನ ದೇವಸ್ಥಾನದಲ್ಲಿ ಇರುವ ಶ್ರೀರಾಮನ ವಿಗ್ರಹ ತುಂಬ ಸುಂದರವಾಗಿದೆ. ಈ ಕೋದಂಡರಾಮ ದೇವಸ್ಥಾನದ ನಿರ್ಮಾಣವು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಆಯಿತು. ಸಂಕ್ರಾಂತಿಯಂದು ಇಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ.

### ಸಾಲಿಗ್ರಾಮ

ಈ ಊರು ಕೂಡ ಕೃಷ್ಣರಾಜನಗರದ ಹತ್ತಿರವೇ ಇದೆ. ಇದು ಹಿಂದೆ ಒಂದು ಜೈನ ಕ್ಷೇತ್ರವಾಗಿದ್ದು, ವ್ಯಾಪಾರಿ ಕೇಂದ್ರವಾಗಿತ್ತು. ಶ್ರೀರಾಮಾನುಜರ ಪ್ರಭಾವದಿಂದ ಶ್ರೀವೈಷ್ಣವ ಕ್ಷೇತ್ರವಾಗಿ ಮಾರ್ಪ ಟ್ಟಿತು. ಆಚಾರ್ಯರೇ ನಿರ್ಮಿಸಿದ ಯೋಗಾನರಸಿಂಹ ದೇವ ಸ್ಥಾನ, ಕೋದಂಡರಾಮ ದೇವಸ್ಥಾನ, ಶ್ರೀವೈಷ್ಣವರಿಗೆ ಅತ್ಯಂತ ಪವಿತ್ರವಾದ ಶ್ರೀಪಾದತೀರ್ಥ, ರಾಮಾನುಜರ ಪಾದುಕೆಗಳು – ಇಲ್ಲಿನ ಪ್ರಮುಖ ಆಕರ್ಷಣೆಗಳು.

### ಶ್ರೀರಂಗಪಟ್ಟಣ

ಆದಿರಂಗ ಕ್ಷೇತ್ರವೆಂದು ಪುರಾಣಪ್ರಸಿದ್ಧವಾದ ಈ ಕ್ಷೇತ್ರ, ಮೈಸೂರು ರಾಜ್ಯದ ರಾಜಧಾನಿಯಾಗಿಯೂ ಇತಿಹಾಸಪ್ರಸಿದ್ಧಿ ಯನ್ನು ಪಡೆದಿತ್ತು. ಹಾಗೆಯೇ ಇದು ಪ್ರಖ್ಯಾತ ಯಾತ್ರಾಸ್ಥಳವೂ ಹೌದು. ಮೈಸೂರಿನಿಂದ ಎಂಟು ಮೈಲುಗಳ ದೂರದಲ್ಲಿ, ಕಾವೇರಿಯ ಎರಡು ಕವಲುಗಳ ಮಧ್ಯೆ ಇರುವ ನಿಸರ್ಗನಿರ್ಮಿತ ದ್ವೀಪಪ್ರದೇಶ ಇದು. ಭವ್ಯವಾದ ಶ್ರೀರಂಗನಾಥ ದೇವಸ್ಥಾನ, ಶ್ರೀಪ್ರಸನ್ನ ಗಂಗಾಧರೇಶ್ವರ ದೇವಸ್ಥಾನ ಇಲ್ಲಿನ ಪ್ರಮುಖ ದೇವಾ ಲಯಗಳು.

ಇಲ್ಲಿಗೆ ಸಮೀಪದ ಕಿರಂಗೂರು ಎಂಬ ಊರಿನಿಂದ, ರಾಮಾನುಜರ ಪ್ರಿಯಶಿಷ್ಯರಾಗಿದ್ದ ಅನಂತಾಳ್ವಾರ್ ಎಂಬ ಮಹನೀಯರು ತಿರುಪತಿಗೆ ತೆರಳಿ, ಶ್ರಮಪಟ್ಟು ಬೆಳೆಸಿದ ಪುಷ್ಪೋದ್ಯಾನವು ಇಂದಿಗೂ ಅಲ್ಲಿ ನಳನಳಿಸುತ್ತಿದೆ. ಅದೇ ರೀತಿ, ಶ್ರೀವೈಷ್ಣವ ಹರಿದಾಸರಾದ ಶ್ರೀತುಲಸೀರಾಮದಾಸರೆಂಬ ಭಕ್ತರು ಶ್ರೀರಂಗಪಟ್ಟದ ಹತ್ತಿರ ಇರುವ ದರಿಸಗುಪ್ಪೆ ಎಂಬಲ್ಲಿ ತಮ್ಮ ದೇಹತ್ಯಾಗ ಮಾಡಿದ ಬಗ್ಗೆ ದಾಖಲೆ ಇದೆ.

ಶ್ರೀರಂಗಪಟ್ಟಣದಲ್ಲಿ ಕಾವೇರಿ ನದಿಯನ್ನು ದಾಟಿ, ಬೆಂಗಳೂರು ಮಾರ್ಗದಲ್ಲಿ ಹೋಗುವಾಗ ಸಿಕ್ಕುವ ಲೋಕಪಾವನಿ ಹೊಳೆ, ಅಲ್ಲೇ ಸನಿಹದಲ್ಲಿ ಎದ್ದುಕಾಣುವ ಕರಿಘಟ್ಟವೆಂಬ

ಶ್ರೀನಿವಾಸಕ್ಷೇತ್ರ, ಶ್ರೀರಂಗಪಟ್ಟಣಕ್ಕೆ ಪೂರ್ವದಲ್ಲಿರುವ ಗಂಜಾಂ, ಸಂಗಮ, ನಿಮಿಷಾಂಬಾ ದೇವಸ್ಥಾನ – ಇವೆಲ್ಲ ಯಾತ್ರಾಸ್ಥಾನಗಳಷ್ಟೆ ಅಲ್ಲ, ವಿಹಾರಸ್ಥಳಗಳೂ ಕೂಡ.

ಶ್ರೀರಂಗಪಟ್ಟಣದ ಸುಪ್ರಸಿದ್ಧ ಶ್ರೀರಂಗನಾಥನನ್ನು 'ಆದಿರಂಗ' ಎಂದು ಕರೆಯುತ್ತಾರೆ. ಇಲ್ಲಿಗೆ ಪಶ್ಚಿಮದಲ್ಲಿ ಗೌತಮ ಕ್ಷೇತ್ರವಿದೆ. ಗೌತಮಮುನಿಗಳು ಶ್ರೀರಂಗನನ್ನು ಪೂಜಿಸುತ್ತಿದ್ದರೆಂದು ಐತಿಹ್ಯವಿದೆ. ಹೊಯ್ಸಳ ದೊರೆ ವಿಷ್ಣುವರ್ಧನನ ಅಣ್ಣನಾದ ಉದಯಾದಿತ್ಯನು ಕ್ರಿ.ಶ. ೧೧೧೨ ರಲ್ಲಿ ಈ ಪಟ್ಟಣವನ್ನು ನಿರ್ಮಿಸಿದನೆಂದು ದಾಖಲೆ ಇದೆ. ಊರಿನ ಸನಿಹದ, ಕಾವೇರಿಯ ಇಕ್ಕೆಡೆಗಳ ಪ್ರದೇಶಗಳನ್ನು ದೊರೆಯಾದ ವಿಷ್ಣುವರ್ಧನನು ರಾಮಾನುಜಾಚಾರ್ಯರಿಗೂ, ಅವರ ಅನುವರ್ತಿಗಳಿಗೂ ದತ್ತಿಕೊಟ್ಟನು. ಅದು 'ಅಷ್ಟಗ್ರಾಮ'ವೆಂದೇ ಹೆಸರಾಯಿತು.

ಶ್ರೀರಂಗನಾಥನ ದೇವಾಲಯವು ದ್ರಾವಿಡ ಶಿಲ್ಪಕಲೆಯ ಶೈಲಿಯಲ್ಲಿದೆ. ಮೂರು ಪ್ರಾಕಾರಗಳುಳ್ಳ ಈ ದೇವಾಲಯ, ಮೂರು ಹಂತಗಳಲ್ಲಿ ನಿರ್ಮಾಣವಾಗಿದೆ. ಒಳಭಾಗ ಹೊಯ್ಸಳರ ಕಾಲದ್ದಾದರೆ, ನವರಂಗ–ಮುಖಮಂಟಪ–ಸುಕನಾಸಿ ಮುಂತಾದವು ವಿಜಯನಗರದ ಕಾಲದ್ದು. ಹೊರಗಿನ ಪ್ರಾಕಾರ ಮತ್ತು ಎತ್ತರದ ಗೋಪುರ ಇತ್ತೀಚಿನದು. ಏಳುಹೆಡೆಗಳ ಆದಿಶೇಷನ ಮೇಲೆ ಯೋಗನಿದ್ರೆಯಲ್ಲಿ ಪವಡಿಸಿರುವ, ಕಪ್ಪುಶಿಲೆಯ ಶ್ರೀರಂಗನಾಥಸ್ವಾಮಿಯ ವಿಗ್ರಹ ನಯನಮನೋಹರವಾಗಿದೆ. ಇದರ ಪಾದದಲ್ಲಿ ಕಾವೇರಿ ಮತ್ತು ಗೌತಮಮುನಿಗಳ ವಿಗ್ರಹಗಳಿವೆ. ಈ ದೇವರನ್ನು ವಾದಿರಾಜರು, ವ್ಯಾಸರಾಯರು, ಕನಕದಾಸರು, ಪುರಂದರದಾಸರು ಮೊದಲಾದ ಅನೇಕ ಹರಿದಾಸರು ತಮ್ಮ ಕೃತಿಗಳಲ್ಲಿ ಹಾಡಿ ಹೊಗಳಿದ್ದಾರೆ.

ಈ ಗುಡಿಯ ಎರಡು ಸ್ತಂಭಗಳಲ್ಲಿ ವಿಷ್ಣುವಿನ ೨೪ ಅವತಾರ ಸ್ವರೂಪಗಳು ಕೆತ್ತಲ್ಪಟ್ಟಿವೆ. ಇವನ್ನು 'ಚತುರ್ವಿಂಶತಿ ಕಂಬ' ಎಂದೇ ಕರೆಯುತ್ತಾರೆ. ಎರಡನೆಯ ಪ್ರಾಕಾರದಲ್ಲಿ ಹಲವಾರು ದೇವರುಗಳ ಸನ್ನಿಧಿಗಳು ಕಾಣಬರುತ್ತವೆ. ಹಾಗೆಯೇ, ಆಳ್ವಾರರು ಮತ್ತು ರಾಮಾನುಜಾಚಾರ್ಯರ ಪ್ರತಿಮೆಗಳೂ ಇವೆ. ಸಮೀಪದಲ್ಲಿಯೇ ಮಹಾಲಕ್ಷ್ಮಿಯ ಸನ್ನಿಧಿಯೂ ಇದೆ.

ರಂಗನಾಥ ದೇವಾಲಯದ ಹತ್ತಿರವೇ ಕಂಠೀರವ ನರಸಿಂಹ ರಾಜ ಒಡೆಯರು ಕಟ್ಟಿದ ಲಕ್ಷ್ಮೀನರಸಿಂಹ ದೇವಾಲಯ ಕಾಣ ಬರುತ್ತದೆ. ಇಲ್ಲಿನ ಮೂಲವಿಗ್ರಹ, ಅಂಬೆಗಾಲಿನ ಶ್ರೀಕೃಷ್ಣ ಮತ್ತು ಮೂರೂವರೆ ಅಡಿ ಎತ್ತರದ ಕಂಠೀರವ ನರಸರಾಜರ ಪ್ರತಿಮೆಗಳು ಆಕರ್ಷಕವಾಗಿವೆ.

ಶ್ರೀರಂಗಪಟ್ಟಣಕ್ಕೆ ಒಂದು ಕಿಲೋಮೀಟರ್ ದೂರದಲ್ಲಿ ಕಾವೇರಿ ಪಶ್ಚಿಮವಾಹಿನಿಯಾಗಿ ಹರಿಯುತ್ತಾಳೆ. ಈ ತಾಣದಲ್ಲಿ ಪರ್ವದಿನಗಳಂದು ಪವಿತ್ರಸ್ನಾನಕ್ಕಾಗಿ ಜನರು ನೆರೆಯುತ್ತಾರೆ.


ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿ ದೇವಸ್ಥಾನ

### ಶಿವನಸಮುದ್ರ

ಇದೂ ಕೂಡ ಕಾವೇರಿ ನದಿ ಕವಲೊಡೆದು ನಿರ್ಮಿಸಿರುವ ದ್ವೀಪವೇ ಆಗಿದೆ. ಇದನ್ನು ಮಧ್ಯರಂಗವೆಂದು ಕರೆಯುತ್ತಾರೆ. ಕಾವೇರಿ ಇಲ್ಲಿ ೩೫೦ ಅಡಿಗಳಷ್ಟು ಆಳದ ಪ್ರಪಾತಕ್ಕೆ ಧುಮುಕುತ್ತದೆ. **ಗಗನಚುಕ್ಕಿ, ಭರಚುಕ್ಕಿ** ಎಂದು ಎರಡು ಭಾಗಗಳಾಗಿ ಧುಮುಕುವ ದೃಶ್ಯ ಅತ್ಯಂತ ಚೇತೋಹಾರಿಯಾದುದು. ಈ ಶಾಖೆಗಳ ಮಧ್ಯಭಾಗವೇ ದ್ವೀಪವಾಗಿದೆ. ಹಿಂದೆ ಇದನ್ನು ಹೆಗ್ಗೆರೆ ಎಂದು ಕರೆಯುತ್ತಿದ್ದರು. ಇಲ್ಲಿನ ದೇವರ ಸಾನ್ನಿಧ್ಯಕ್ಕೆ 'ಜಗನ್ಮೋಹನ ರಂಗನಾಥ'ನೆಂದು ಹೆಸರು.

### ಹಂಪಿ

ವಿಶ್ವಪ್ರಸಿದ್ಧ ಹಂಪಿ ಕೂಡ ಒಂದು ಶ್ರೀವೈಷ್ಣವ ಕ್ಷೇತ್ರವೇ ಆಗಿದೆ. ವಿಜಯವಿಠ್ಠಲ ದೇವಸ್ಥಾನ, ಹಜಾರರಾಮಸ್ವಾಮಿಯ ದೇವಸ್ಥಾನ, ಭಗ್ನಗೊಂಡಿರುವ ೨೨ ಅಡಿ ಎತ್ತರದ ಉಗ್ರ ನರಸಿಂಹ – ಇವೆಲ್ಲವೂ ಶ್ರೀವೈಷ್ಣವರಿಗೆ ಪವಿತ್ರಸ್ಥಾನಗಳು. ವಿಜಯನಗರದ ಅರಸರಲ್ಲಿ ಅನೇಕರು ಶ್ರೀವೈಷ್ಣವ ಧರ್ಮಕ್ಕೆ ಪ್ರೋತ್ಸಾಹ ಕೊಟ್ಟರು; ತಿರುಪತಿಯ ದೇವಸ್ಥಾನಕ್ಕೆ ಕೊಡುಗೆಗಳನ್ನು ನೀಡಿದರು. ಕೃಷ್ಣದೇವರಾಯನು ರಚಿಸಿದ ತೆಲುಗು ಗ್ರಂಥ 'ಆಮುಕ್ತಮಾಲ್ಯದ', ಅವನ ಪತ್ನಿಯರು ರಚಿಸಿದ 'ಜಾಂಬವತೀ ಪರಿಣಯ' – ಈ ಎರಡು ಗ್ರಂಥಗಳಲ್ಲಿ ಕಂಡುಬರುವುದು ಶ್ರೀವೈಷ್ಣವ ಧರ್ಮದ ನಿರೂಪಣೆಯೇ.